ಒ.ಎಸ್.ನಂಬ್ರ: **235/2016** ಡಿ.ಡಬ್ಲ್ಯೂ: **1**

ದಿನಾಂಕಃ 05-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಾದ ಶ್ರೀ ಟಿ ಬಿ ಎಸ್ ರವರಿಂದ

1974 ರಲ್ಲಿ ಆದ ನಿ.ಪಿ.4 ರ ವಿಭಾಗ ಪತ್ರದಲ್ಲಿ ನಾನು ಕೂಡ ಪಕ್ಷಗಾರನಾಗಿದ್ದೇನೆ ಎಂದರೆ ಸರಿ. ದಾವಾ ಸರ್ವೆ ನಂ. 110/3 ಪಿ2 ಒಟ್ಟು ವಿಸ್ತೀರ್ಣ 1 ಎಕರೆ. ದಾವಾ ಸರ್ವೆ ನಂಬರ 3 ಜನರಿಗೆ ಭಾಗ ಆಗಿದೆ ಎಂದರೆ ಸರಿ. ಆ ಮೂರು ಜನರಲ್ಲಿ 1ನೇ ಪ್ರತಿವಾದಿ ಜಯಶೀಲಾ ಶೆಡ್ತಿರವರ ಕವರಿಗೆ 50 ಸೆಂಟ್ಸ, ವಾದಿ ಶಂಕರ ಹೆಗ್ಡೆರವರಿಗೆ 40 ಸೆಂಟ್ಸ ಮತ್ತು ವಾದಿಯ ಅಣ್ಣ ಶಿವರಾಮ ಹೆಗ್ಡೆರವರಿಗೆ 4 ಸೆಂಟ್ಸ ಬಂದಿರುತ್ತದೆ ಎಂದರೆ ಸರಿ. 3 ಜನರಿಗೆ ವಿಭಾಗ ಮಾಡಲಾದ ಸ್ವತ್ತುಗಳಿಗೆ ಪ್ರತ್ಯೇಕವಾದ ಗಡಿಗಳನ್ನು ಹಾಕಲಾಗಿದೆ ಎಂದರೆ ಸರಿ. ಆ ವಿಭಾಗದ ಪ್ರಕಾರ ಅವರವರ ಹೆಸರಿಗೆ ಪಹಣಿ ದಾಖಲಾಗಿ ವಿಭಾಗದಂತೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

ವಾದಿಯ ಭಾಗಕ್ಕೆ ಬಂದ ಸ್ವತ್ತಿನ ಮೇಲೆ ಪ್ರತಿವಾದಿಗಳು ಯಾವುದೇ ಹಕ್ಕನ್ನು ಕೇಳುತ್ತಿಲ್ಲ. 2016 ಕೂಡ ಯಾವುದೇ ವಿವಾದ ಆಗಿರುವುದಿಲ್ಲ. ವಿಭಾಗ ಪತ್ರದಲ್ಲಿ ಗಡಿಗಳು ಗುರುತಿಸಿದ್ದು, ಈಗಲೂ ಅದು ಹಾಗೆ ಇದೆ. ವಾದಿಯವರ ಸ್ಥಳದಲ್ಲಿ ಮನೆ, ಕೊಟ್ಟಿಗೆ ಮತ್ತು ಮರಗಳು ಇವೆ ಎಂದರೆ ಸರಿ. 2016 ರಲ್ಲಿ ಪ್ಲಾಟಿಂಗ್ ಆದ ವಿಚಾರ ನನಗೆ ಗೊತ್ತಿಲ್ಲ. ಪ್ಲಾಟಿಂಗ್ ಆದ ವಿಚಾರ 1ನೇ ಪ್ರತಿವಾದಿಗೆ ಗೊತ್ತು ಎಂದರೆ ಸರಿಯಲ್ಲ. ವಾದಿಯ ತಮ್ಮ ಎ ಶೆಡ್ಯೂಲು ಸ್ವತ್ತಿನ ಜಾಗಕ್ಕೆ ಅಳತೆ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸರ್ವೆಯರ್ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಅಳತೆ ಮಾಡಲು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 05-12-2016 ರಂದು ನಾವು ವಾದಿಯ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ ಮರದಲ್ಲಿನ ಅಡಿಕೆಗಳನ್ನು ಕೀಳಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ದಿಃ 06-12-2016 ರಂದು ವಾದಿಯು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸ ಠಾಣೆಯಿಂದ ವಾದಿಯು ದೂರು ನೀಡಿದ ಬಾಬ್ತು ರಸೀದಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ವಾದಿಯು ತಮ್ಮ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡಬಾರದು ಎಂದು ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ. ವಾದಿಯ ಸ್ವಾಧೀನಕ್ಕೆ ನಮ್ಮ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**